ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ಈಗಲೇ ಹೇಳುವುದಕ್ಕಾಗುವುದಿಲ್ಲ. ಮುಂದೆ ಬಡ್ಜೆಟ್ ಬಂದಾಗ ಅದರ ಬಗ್ಗೆ ವಿವರಣೆ ಮತ್ತು ಮಾಹಿತಿ ಇರುತ್ತದೆ, ನೋಡಬಹುದು. ಇನ್ನು ಈ ಬಗ್ಗೆ ಕೇಂದ್ರ ಸರ್ಕಾರದವರು ಏನಾದರೂ ನಾರಮ್ಸ್ ಹಾಕಿದ್ದಾರೆಯೇ ಎಂದು ಕೇಳಿದ್ದಾರೆ. ಅದರ ಬಗ್ಗೆ ಹೇಳಬೇಕಾದರೆ ಇದೇ ತರಹ ಇದರ ಬಗ್ಗೆ ನಾರಮ್ಸ್ ಇರಬೇಕೆಂದು ಅವರು ಕಟ್ಟುನಿಟ್ಟಾಗಿ ಹಾಕಿಲ್ಲ. ಪ್ಲಾನಿಂಗ್ ಕಮೀಷನ್ ಮುಂದೆ, ಒಂದೊಂದು ಸಲ ಕೇಂದ್ರ ಅರ್ಥಖಾತೆಯ ಜೊತೆಗೆ ಹಾಗೂ ಅಲ್ಲಿನ ಕೇಂದ್ರ ಮಂತ್ರಿಗಳ ಜೊತೆಗೆ ಈ ವಿಚಾರದಲ್ಲಿ ಚರ್ಚೆಯಾಗುತ್ತದೆ. ಆದರೆ ಇದರ ಬಗ್ಗೆ ಒಂದು ಕಟ್ಟುನಿಟ್ಟಾಗಿ ನಾರಮ್ಸ್ ಹಾಕುವ ಪರಿಸ್ಥಿತಿಯಲ್ಲಿ ಅವರು ಇಲ್ಲ. ಆದುದರಿಂದ ರಾಜ್ಯ ಸರ್ಕಾರಗಳೇ ಈ ಡೆವಲಪ್‌ಮೆಂಟಲ್ ಮತ್ತು ನಾನ್ ಡೆವಲಪ್‌ಮೆಂಟಲ್ ಪ್ಲಾನ್‌ಗೆ ಖರ್ಚು ಮಾಡಬೇಕಾಗುವ ಪರಿಸ್ಥಿತಿ ಬರುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.— ಒಟ್ಟು ಖರ್ಚಿನಲ್ಲಿ ಸಿಬ್ಬಂದಿಗೆ ಖರ್ಚಾದದ್ದು ಮೂರನೆಯ ಒಂದು ಭಾಗ ಎಂದು ಇದೆ. ಡೆವಲಪ್‌ಮೆಂಟಲ್ ಮತ್ತು ನಾನ್ ಡೆವಲಪ್‌ಮೆಂಟಲ್‌ನಲ್ಲಿ ಸಿಬ್ಬಂದಿಯ ಖರ್ಚು, ಸಂಬಳ ಇತ್ಯಾದಿ ಸೇರಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.— ಅದೂ ಸೇರಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಬೇರೆ ಬೇರೆ ರಾಜ್ಯಗಳಿಗೆ ನಮ್ಮ ರಾಜ್ಯವನ್ನು ಈ ವಿಷಯದಲ್ಲಿ ಹೋಲಿಸಿದರೆ ತಾವು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಕೇರಳ ಮತ್ತು ಆಂಧ್ರಪ್ರದೇಶದಲ್ಲಿ ಡೆವಲಪ್‌ಮೆಂಟಲ್ ಖರ್ಚು ಶೇಕಡಾವಾರು ನಮ್ಮ ರಾಜ್ಯಕ್ಕಿಂತ ಜಾಸ್ತಿ ಇದೆ. 1981ರಲ್ಲಿ ಕೇರಳದಲ್ಲಿ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ಗೆ ಖರ್ಚಾದ ಹಣ 86.79 ಕೋಟಿ ರೂಪಾಯಿಗಳು ಇದ್ದರೆ ಕರ್ನಾಟಕದಲ್ಲಿ 76.79 ಕೋಟಿ ರೂಪಾಯಿಗಳು, 1983ರಲ್ಲಿ 83.03 ಕೋಟಿ ರೂಪಾಯಿಗಳು ಇದ್ದರೆ ಕರ್ನಾಟಕದಲ್ಲಿ 73.81 ಕೋಟಿ ರೂಪಾಯಿಗಳು ಇದೆ. ಹಾಗೆಯೇ ಆಂಧ್ರದಲ್ಲಿ ಇದು ಜಾಸ್ತಿ ಇದೆ. ಇದಕ್ಕೆ ಏನಾದರೂ ಕಾರಣಗಳು ಇವೆಯೇ ? ಅದಕ್ಕೋಸ್ಕರ ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಕಡಿಮೆ ಖರ್ಚು ಮಾಡಲಿಕ್ಕೆ ಕಾರಣವೇನು ? ನಿಮ್ಮ ಥಿಂಕ್ ಟ್ಯಾಂಕ್ ಅಭಿವೃದ್ಧಿ ಕಾರ್ಯಗಳ ಬಗ್ಗೆ ಏನು ಮಾಡುತ್ತಿದೆ ?

ಶ್ರೀ ರಾಮಕೃಷ್ಣ ಹೆಗಡೆ.— ಇದಕ್ಕೆ ಮುಖ್ಯ ಕಾರಣವೆಂದರೆ ಆದಾಯ. ಆಂಧ್ರ, ಮಹಾರಾಷ್ಟ್ರ, ತಮಿಳುನಾಡಿನಲ್ಲಿ ಆದಾಯ ಬಹಳ ಹೆಚ್ಚಾಗಿದೆ. ಆದುದರಿಂದ ಖರ್ಚು ಆದಾಯದ ಸಪಾತದಲ್ಲಿ ಬೆಳೆಯುವುದಿಲ್ಲ. ಆದ್ದರಿಂದ ನಾನ್ ಡೆವಲಪ್‌ಮೆಂಟ್ ಪರ್ಸೆಂಟೇಜ್ ಕಡಿಮೆ ಕಾಣುತ್ತದೆ. ನಾವು ಕೊಟ್ಟಿರತಕ್ಕ ಅಂಕಿಅಂಶಗಳು 82-83 ರವರೆಗೆ ಮಾತ್ರ. 83-84 ರಲ್ಲಿ ನಮ್ಮ ಪರಿಸ್ಥಿತಿಯೂ ಸ್ವಲ್ಪ ಮಟ್ಟಿಗೆ ಉತ್ತಮಗೊಂಡಿದೆ.

ವಿಷಯ : ರಾಜ್ಯದಲ್ಲಿ ಆರೋಗ್ಯ ಕೇಂದ್ರಗಳ ಸ್ಥಾಪನೆ

ಪ್ರಶ್ನೆ. 242 (638) ಶ್ರೀ ಬಸವರಾಜ ಪಾಟೀಲ್ ಅನ್ವರಿ (ಲಿಂಗಸಗೂರು).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ :—

ಅ) 1983-84ರ ಸಾಲಿಗೆ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಆರೋಗ್ಯ ಕೇಂದ್ರಗಳು ಹಾಗೂ ಘಟಕಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಹಾಗಿದ್ದಲ್ಲಿ ಅದರಲ್ಲಿ ರಾಯಚೂರು ಜಿಲ್ಲೆಗೆ ಎಷ್ಟು ಮಂಜೂರು ಮಾಡಿದ್ದಿರಿ;

ಆ) ಲಿಂಗಸೂಗೂರು ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳೆಷ್ಟು;

ಇ) ಸದರಿ ತಾಲ್ಲೂಕಿಗೆ ಹೆಚ್ಚಿನ ಆರೋಗ್ಯ ಘಟಕಗಳಿರಬೇಕೆಂದು ಜನರಿಂದ ಬೇಡಿಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮವೇನು;

ಉ) ನಾಗರಾಳ, ಸಜ್ಜಲಗುಡ್ಡ, ತಲೆಕಟ್ಟ, ಅಮರೇಶ್ವರ ಈ ಸ್ಥಳಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳನ್ನು ಆದ್ಯತೆ ಕೊಟ್ಟು ಪ್ರಾರಂಭಿಸಲಾಗುವುದೇ ?

ಉತ್ತರ : ಪಿ. ಜಿ. ಆರ್. ಸಿಂಧ್ಯ.— (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—ಅ) 1983-84ನೇ ಸಾಲಿನಲ್ಲಿ 13 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು 73 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡಲಾಗಿದೆ. (ಪಟ್ಟಿಯನ್ನು ಲಗತ್ತಿಸಲಾಗಿದೆ) ರಾಯಚೂರು ಜಿಲ್ಲೆಗೆ ಪ್ರಾಥಮಿಕ ಘಟಕಗಳನ್ನು ಮಂಜೂರು ಮಾಡಿರುವುದಿಲ್ಲ.

ಆ) ಲಿಂಗಸೂಗೂರು ತಾಲ್ಲೂಕಿನಲ್ಲಿ 2 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 7 ಪ್ರಾಥಮಿಕ ಆರೋಗ್ಯ ಘಟಕಗಳು ಇವೆ.

ಇ) ಬಂದಿದೆ. ಈ) ಬೇಡಿಕೆಗಳು ಪರಿಶೀಲನೆಯಲ್ಲಿವೆ.

ಉ) ಪರಿಶೀಲಿಸಲಾಗುವುದು.

ಮಾನ್ಯ ಸದಸ್ಯರು ಹಾಜರಿರಲಿಲ್ಲ

1883-84ನೇ ಸಾಲಿನಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳ ವಿವರಗಳು ನಮೂದಿಸಿರುವ ಪಟ್ಟಿ.

ಬೆಂಗಳೂರು ವಿಭಾಗ	ಪ್ರಾಥಮಿಕ ಆರೋಗ್ಯ ಕೇಂದ್ರ	ಪ್ರಾಥಮಿಕ ಆರೋಗ್ಯ ಘಟಕ
ಬೆಂಗಳೂರು	—	9
ಚಿತ್ರದುರ್ಗ	—	2+2=4
ಕೋಲಾರ	2	3
ಶಿವಮೊಗ್ಗ	1	4+2=6
ತುಮಕೂರು	1	9+2=11
	4	33
ಬೆಳಗಾಂ ವಿಭಾಗ		
ಬೆಳಗಾಂ	—	1
ಧಾರವಾಡ	—	2
ಬಿಜಾಪುರ	1	1
ಉತ್ತರ ಕನ್ನಡ	1	1+1=2
	2	6
ಗುಲ್ಬರ್ಗ ವಿಭಾಗ		
ಗುಲ್ಬರ್ಗ	—	3
ರಾಯಚೂರು	—	—
ಬೀದರ್	1	2
ಬಳ್ಳಾರಿ	—	1+1=2
	1	7
ಮೈಸೂರು ವಿಭಾಗ		
ಮೈಸೂರು	1+1=2	2+4=6
ಕೊಡಗು	1	—
ದಕ್ಷಿಣ ಕನ್ನಡ	1	—
ಚಿಕ್ಕಮಗಳೂರು	1	8+1=9
ಮಂಡ್ಯ	1	6
ಹಾಸನ	—	5+1=6
	6	27
ಒಟ್ಟು	13	73

ವಿಷಯ : ಅವಶ್ಯಕ ವಸ್ತುಗಳ ಪೂರೈಕೆ

ಪ್ರಶ್ನೆ. 243 (631) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ಆಹಾರ ನಿಗಮದಿಂದ ಅವಶ್ಯಕ ವಸ್ತುಗಳನ್ನು ಪೂರೈಸುವ ಸಂದರ್ಭದಲ್ಲಿ ಅದರ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಏನು ಕ್ರಮ ಕೈಗೊಳ್ಳಲಾಗುತ್ತಿದೆ ?

ಆ) ಅಕ್ಕಿ, ಗೋಧಿ, ಸೋಜಿ ಮುಂತಾದ ಪದಾರ್ಥಗಳಲ್ಲಿ ಕಲಬೆರಕೆ, ಮಣ್ಣು ಕಲ್ಲು ಇರುವುದರ ಬಗ್ಗೆ ಚಿಲ್ಲರೆ ವ್ಯಾಪಾರಸ್ಥರಿಂದ ಹಾಗೂ ಸಹಕಾರ ಸಂಘಗಳಿಂದ ದೂರು ಬಂದಿದೆಯೆ ? ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಉತ್ತರ : ಶ್ರೀ ಜೆ. ಬಸವಣ್ಣಪ್ಪ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).— ಅ) 1. ಅವಶ್ಯಕ ವಸ್ತುಗಳ ಗುಣಮಟ್ಟ ಕೆಡದಂತೆ ಮಳಿಗೆಗಳಲ್ಲಿ ಶೇಖರಿಸಿಡಲಾಗುವುದು.

2. ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆ ಮಾಡುವ ಮೊದಲು ಅವುಗಳ ಗುಣಮಟ್ಟವನ್ನು